**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.597/2022**

**CW -5 PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಆದಿಶೇಷ ಉರ್ಫ ಶೇಷಪ್ಪ |
| ತಂದೆ | ಃ | ಹನುಮಂತ |
| ವಯಸ್ಸು | ಃ | 25 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗಾಣದಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **29-05-2026** |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ನನ್ನ ಅಣ್ಣ, ಚಾಸಾ-4 ನನ್ನ ಸಣ್ಣಪ್ಪ, ಚಾಸಾ-6 ರಿಂದ 8 ಸಂಬಂಧಿಕರು, ಚಾಸಾ-9 ಮತ್ತು 10 ಗೊತ್ತು. ಆರೋಪಿತರು ಗೊತ್ತು. ದಿನಾಂಕ 22.06.2022 ರಂದು ಸಂಜೆ 5 ಗಂಟೆಗೆ ಜಮೀನಿನಲ್ಲಿ ನಾನು ಚಾಸಾ-1, 4, 6 ರಿಂದ 8 ತಿಪ್ಪಣ್ಣನ ಹೊಲದಲ್ಲಿ ಕೆಲಸ ಮಾಡುತ್ತಿದ್ದೇವು. ಆಗ 1 ನೇ ಆರೋಪಿ ಜಮೀನಿಗೆ ಬಂದು ನಮ್ಮ ಹೊಲದಲ್ಲಿ ನೀವು ಏನು ಮಾಡುತ್ತಿದ್ದೀರಿ ಎಂದು ಅವಾಚ್ಯವಾಗಿ ಬೈದು ಫೋನ್ ಮೂಲಕ ತನ್ನ ಸಂಬಂದಿಕರಾದ ಆರೋಪಿತರಾದ 2 ರಿಂದ 8 ರವರನ್ನು ಸ್ಥಳಕ್ಕೆ ಕರೆಸಿಕೊಂಡು ನಮ್ಮ ಜೊತೆ ಜಗಳ ತೆಗೆದಿರುತ್ತಾರೆ. 1 ನೇ ಆರೋಪಿ ಈ ಸೂಳೇ ಮಕ್ಕಳದು ಬಹಳ ಆಗಿದೆ ಎಂದು ಚಾಸಾ-1 ರವರ ಕಪಾಳಕ್ಕೆ ಕೈಯಿಂದ ಹೊಡೆದು ಬಡಿಗೆಯಿಂದ ಮೊಳಕಾಲಿಗೆ ಮತ್ತು ಮೊಣಕಾಲು ಕೆಳಗೆ ಹೊಡೆದು ಗಾಯ ಮಾಡಿರುತ್ತಾರೆ. ನಂತರ 2 ನೇ ಆರೋಪಿ ಚಾಸಾ-1 ರವರ ಹೊಟ್ಟೆಗೆ ಕೈಯಿಂದ ಗುದ್ದಿರುತ್ತಾನೆ. 7 ನೇ ಆರೋಪಿ ದೇವರಾಜ ಚಾಸಾ-4 ರವರಿಗೆ ಸೂಳೇ ಮಕ್ಕಳದು ಬಹಳ ಆಗಿದೆ ಎಂದು ಕಲ್ಲಿನಿಂದ ಬಾಯಿಗೆ ಹೊಡೆದು ರಕ್ತ ಗಾಯ ಮಾಡಿ ಮತ್ತು ಆತನನ್ನು ಕೆಳಗೆ ಕೆಡವಿ ಮೊಣಕಾಲಿನಿಂದ ಗುದ್ದಿರುತ್ತಾನೆ. 5 ನೇ ಆರೋಪಿ ನನಗೆ ಚಪ್ಪಲಿಯಿಂದ ಮುಖಕ್ಕೆ ಹೊಡೆದಿರುತ್ತಾಳೆ. 6 ನೇ ಆರೋಪಿ ಈ ಸೂಳೇಯರದು ಬಹಳ ಆಗಿದೆ ಎಂದು ಚಾಸಾ-6 ರವರನ್ನು ಎಳೆದಾಡಿ ಕೈಯಿಂದ ತಲೆಗೆ ಹೊಡೆದಿರುತ್ತಾಳೆ. 8 ನೇ ಆರೋಪಿ ಮಾರೆಮ್ಮ ಚಾಸಾ-7 ರವರಿಗೆ ಕೈ ಹಿಡಿದು ಎಳೆದಾಡಿ ಬೆನ್ನಿಗೆ ಗುದ್ದಿರುತ್ತಾಳೆ. 1 ನೇ ಆರೋಪಿ ಚಾಸಾ-8 ರವರಿಗೆ ಈ ಸೂಳೇಯರದು ಎಂದು ಬಹಳ ಆಗಿದೆ ಎಂದು ಸೀರೆ ಹಿಡಿದ ಎಳೆದಾಡಿ ಕುಪ್ಪಸ ಹರಿದಿರುತ್ತಾನೆ. ಆಗ ಚಾಸಾ-9 ಮತ್ತು 10 ರವರು ಜಗಳ ಬಿಡಿಸಿರುತ್ತಾರೆ. ಆಗ ಈ ಭಾರಿ ಉಳಿದುಕೊಂಡಿರಿ ಇನ್ನೊಂದು ಸಲ ಜಮೀನಿಗೆ ಬಂದರೆ ನಿಮ್ಮನ್ನು ಕೊಡಲಿನಿಂದ ಸಣ್ಣ ಸಣ್ಣ ತುಂಡು ಮಾಡಿ ಚರಗ ಚಲ್ಲಿದಂತೆ ಜಮೀನಿನಲ್ಲಿ ಚೆಲ್ಲುತ್ತೇವೆ ಅಂತ ಜೀವದ ಬೆದರಿಕೆ ಹಾಕಿರುತ್ತಾರೆ. ಆ ಕುರಿತು

ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಬಡಿಗೆ, ಕಲ್ಲು ಮತ್ತು ಚಪ್ಪಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳ್ನು ಕ್ರಮವಾಗಿ ಈಗಾಗಲೇ ಮುಮಾ-1 ರಿಂದ 3 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು:- ಆರೋಪಿತರ ಪರ SMR ವಕೀಲರಿಂದ**

ನನಗೆ ಓದಲು ಬರೆಯಲು ಬರುವುದಿಲ್ಲ. ದಿನಾಂಕ 22.06.2022 ರಂದು ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಘಟನೆ ನಡೆದ ದಿನ ರಾತ್ರಿ 10 ಗಂಟೆಗೆ ಆಸ್ಪತ್ರೆಗೆ ನಾನು, ಶಿವರಾಜ ಮತ್ತು ಯಮನಪ್ಪ ಹೋಗಿರುತ್ತೇವೆ. ಘಟನೆ ದಿನ ನನ್ನನ್ನು ವಿಚಾರಣೆ ಮಾಡಿರುವುದನ್ನು ಹೊರತು ಪಡಿಸಿ ಬೇರೆ ದಿನ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲಿಸರು ಬರೆದುಕೊಂಡ ಹೇಳಿಕೆಯನ್ನು ನನಗೆ ಓದಿ ಹೇಳಿಲ್ಲ. ದೂರನ್ನು ನಾನು ಶಿವರಾಜ ಮತ್ತು ಯಮನಪ್ಪ ಜಾಲಹಳ್ಳಿ ಠಾಣೆಯಲ್ಲಿ ದೂರು ನೀಡಿರುತ್ತೇವೆ. ಠಾಣೆಗೆ ದೂರು ಕೊಡಲು ಹೋದಾಗ ಅಂದಾಜು ರಾತ್ರಿ 8 ಗಂಟೆ ಆಗಿತ್ತು. ಠಾಣೆಯಲ್ಲಿ ಅಂದಾಜು 1 ತಾಸು ಇದ್ದೆವು. ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಹೋಗಿರುತ್ತೇವೆ. ಚಾಸಾ-1 ಮತ್ತು 4 ರವರ ರಿಮ್ಸ್ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ದಾಖಲು ಆಗಿರುತ್ತಾರೆ. ನನಗೆ ಸಣ್ಣಪುಟ್ಟ ಗಾಯಗಳು ಆಗಿದ್ದರಿಂದ ನಾನು ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ದಿನಾಂಕ 22.06.2022 ರಂದು ರಾತ್ರಿ 10 ಗಂಟೆಗೆ ಆಸ್ಪತ್ರೆಗೆ ಹೋಗಿರತ್ತೇವೆ ಮತ್ತು ಚಿಕಿತ್ಸೆ ಪಡೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸ.ನಂ.92 1 ನೇ ಆರೋಪಿ ಹನುಮಂತನಿಗೆ ಸೇರಿದ್ದು ಎಂದರೆ ಸರಿಯಲ್ಲ. ಕಳೆದ 20 ವರ್ಷಗಳಿಂದ ಹನುಮಂತ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಆರೋೇಪಿತರಿಂದ ಜಮೀನನ್ನು ಕಬಳಿಸುವ ಉದ್ದೇಶದಿಂದ ಯಾವುದೇ ಘಟನೆ ನಡೆದಿಯದಿದ್ದರೂ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ಯಾವುದೇ ಘಟನೆ ಆಗಿರುವುದಿಲ್ಲ ನಮಗೆ ಆರೋಪಿತರು ಮುಮಾ-1 ರಿಂದ 3 ಇವುಗಳಿಂದ ಹೊಡೆದಿಲ್ಲ ಗಾಯಗಳು ಆಗಿಲ್ಲ, ಅವಾಚ್ಯವಾಗಿ ಬೈದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಕುಪ್ಪಸ ಹರಿದು ಅವಮಾನ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಮುಮಾ-1 ರಿಂದ 3 ರಂತವು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಹಿರಿಯ ಸಿವಿಲ್‌ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.597/2022**

**CW -3 PW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಚನ್ನಬಸವ |
| ತಂದೆ | ಃ | ಬಾಲಗೌಡ |
| ವಯಸ್ಸು | ಃ | 53 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗಾಣದಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **29-05-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಚಾಸಾ-2 ಗೊತ್ತು ಅವರು ಮೃತಪಟ್ಟಿರುತ್ತಾರೆ. ಈಗ 4 ವರ್ಷಗಳ ಹಿಂದೆ ಗಾಣದಾಳ ಗ್ರಾಮದ ತಿಪ್ಪಣನ ಹೊಲದಲ್ಲಿ ಪೋಲಿಸರು ಚಾಸಾ-10 ರವರು ತೊರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಪಂಚನಾಮೆ ಮಾಡಿ ಸ್ಥಳದಿಂದ ಬಡಿಗೆ, ಕಲ್ಲು ಮತ್ತು ಚಪ್ಪಲಿಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಕ್ರಮವಾಗಿ ಮುಮಾ-1 ರಿಂದ 3 ಎಂದು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲು:- ಆರೋಪಿತರ SMR ವಕೀಲರಂದ**

ಪಂಚನಾಮೆ ಎಂದರೆ ಏನು ಮಾಡುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಪೋಲಿಸರು ಬಂದಾಗ ನಾನು, ಅಮರೇಶ ಗಾಣದಾಳ ಗ್ರಾಮದ ಕಟ್ಟೆ ಹತ್ತಿರ ಇದ್ದೆವು ಆಗ ಮತ್ತು ದಿದ್ದಿ ಬಸವ ತಂದೆ ದುರುಗಪ್ಪ ಕೊನೆಮನೆ ಬಂದು ಜಾಗ ತೋರಿಸುತ್ತೇನೆ ಎಂದು ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ. ಘಟನ ಸ್ಥಳದ ಪೂರ್ವಕ್ಕೆ ಗುಡ್ಡ, ಪಶ್ಚಿಮಕ್ಕೆ ಗುಡ್ಡ ಇರುತ್ತದೆ. ಸಾಕ್ಷಿ ಮುಂದುವರೆದು ಸುತ್ತಲೂ ಗುಡ್ಡ ಇರುತ್ತದೆ ಎಂದು ನುಡಿಯುತ್ತಾರೆ. ಗುಡ್ಡದಲ್ಲಿ ಜಮೀನು ಇದ್ದು ಅಲ್ಲಿ ಜಗಳವಾಗಿರುತ್ತದೆ. ಜಗಳ ನಡೆದ ಜಮೀನು ಸ.ನಂ. ಹೇಳಲು ಬರುವುದಿಲ್ಲ. ಘಟನ ಸ್ಥಳದಲ್ಲಿ ಇದ್ದ ಬಡಿಗೆ, ಕಲ್ಲು ಮತ್ತು ಚಪ್ಪಲಿಯನ್ನು ಪೋಲಿಸರು ಪಂಚನಾಮೆ ಮಾಡಿ ತೆಗೆದುಕೊಂಡಿರುತ್ತಾರೆ. ಕಟ್ಟಿಗೆ ಯಾವ ಜಾತಿಯದ್ದು ಇತ್ತು ಎಂದು ನಾನು ನೋಡಿರುವುದಿಲ್ಲ. ಕಟ್ಟಿಗೆ ಮತ್ತು ಕಲ್ಲಿಗೆ ರಕ್ತದ ಕಲೆ ಹತ್ತಿರುವುದನ್ನು ನಾನು ನೋಡಿರುವುದಿಲ್ಲ. ಚಪ್ಪಲಿ ಯಾವ ಕಂಪನಿ ಮತ್ತು ಅದರ ಅಳತೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯದ ಮುಂದೆ ಇರುವ ಮುಮಾಗಳನ್ನು ನೋಡಿ ಇವುಗಳನೇ ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮುಮಾ-1 ರಿಂದ 3 ಇವುಗಳು ಎಲ್ಲ ಕಡೆ

ಸಿಗುತ್ತವೆ ಎಂದರೆ ಸರಿ. ಪಂಚನಾಮೆಗೆ ಎಷ್ಟು ಸಹಿ ಪಡೆದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು 2 ಸಲ ಹೆಬ್ಬೆಟ್ಟಿನ ಗುರುತು ಹಾಕಿರಬಹುದು. ಬೇರೆಯವರು ಎಷ್ಟು ಸಹಿ ಮಾಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ನನಗೆ ಮತ್ತು ಚಾಸಾ-1 ರವರ ಜೊತೆ ಒಳ್ಳೆಯ ಒಡನಾಟ ಇದೆ ಎಂದರೆ ಸರಿಯಲ್ಲ. ಚಾಸಾ-1 ಬೆಂಗಳೂರಿನಲ್ಲಿ ಇರುತ್ತಾನೆ ಎಂದರೆ ಸಾಕ್ಷಿ ಈಗ ಬೆಂಗಳೂರಿಗೆ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.597/2022**

**CW -1 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಯಮನಪ್ಪ |
| ತಂದೆ | ಃ | ಹನುಮಂತ |
| ವಯಸ್ಸು | ಃ | 34 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಗಾಣದಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **29-05-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಚಾಸಾ-4 ನನ್ನ ಚಿಕ್ಕಪ್ಪ, ಚಾಸಾ-5 ತಮ್ಮ, ಚಾಸಾ-6 ತಾಯಿ, ಚಾಸಾ-7, 8 ಚಿಕ್ಕಮ್ಮನವರು, ಚಾಸಾ-9 ಗೊತ್ತು. ಆರೋಪಿತರು ಗೊತ್ತು. ದಿನಾಂಕ 22.06.2022 ರಂದು ಸಂಜೆ 5 ಗಂಟೆಗೆ ನಾನು ಚಾಸಾ-4 ರಿಂದ 8 ರವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 1 ನೇ ಆರೋಪಿ ಅಲ್ಲಿಗೆ ಬಂದು ಸೂಳೇ ಮಕ್ಕಳೇ ಈ ಹೊಲ ನಮ್ಮದು ಇದರಲ್ಲಿ ನೀವೇನು ಮಾಡುತ್ತಿದ್ದೀರಿ ಎಂದು ಅವಾಚ್ಯವಾಗಿ ಬೈದು ನನಗೆ ಕೈಯಿಂದ 1 ನೇ ಆರೋಪಿ ಕಪಾಳಕ್ಕೆ ಹೊಡೆದಿರುತ್ತಾನೆ. ನಂತರ ನಿಮ್ಮ ಕುಂಡಿಯಲ್ಲಿ ದಮ್ಮು ಎಷ್ಟು ಇದೇ ಬನ್ನಿ ಎಂದು ಬಡಿಗೆಯಿಂದ ಮೊಣಕಾಲಿನಲ್ಲಿ ಮತ್ತು ಮೊಣಕಾಲಿನ ಕೆಳಗೆ ಹೊಡೆದು ಗಾಯ ಮಾಡುತ್ತಾರೆ. ನಂತರ 1 ನೇ ಆರೋಪಿ ನನ್ನ ಮಕ್ಕಳನ್ನು ಕರೆದುಕೊಂಡು ಬರುತ್ತೇನೆ ಅಂತ ಹೇಳಿ ಹೋಗಿ 2 ರಿಂದ 8 ಆರೋಪಿತರನ್ನು ಜಮೀನಿಗೆ ಕರೆದುಕೊಂಡು ಬಂದು ನಮ್ಮ ಜೊತೆ ಜಗಳ ತೆಗೆದು 2 ನೇ ಆರೋಪಿ ನನ್ನ ಹೊಟ್ಟೆಗೆ ಗುದ್ದಿರುತ್ತಾನೆ. 7 ನೇ ಆರೋಪಿ ಸೂಳೇ ಮಕ್ಕಳೇ ನಿಮ್ಮದು ಬಹಳ ಆಗಿದೆ ಎಂದು ಚಾಸಾ-4 ರವರಿಗೆ ಕಲ್ಲಿನಿಂದ ಬಾಯಿಗೆ ಹೊಡೆದು ರಕ್ತ ಗಾಯ ಮಾಡಿರುತ್ತಾನೆ. 7 ನೇ ಆರೋಪಿ ಚಾಸಾ-4 ರವರನ್ನು ನೆಲಕ್ಕೆ ಕೆಡವಿ ತನ್ನ ಮೊಣಕಾಲಿನಿಂದ ಚಾಸಾ-4 ರವರ ಬೆನ್ನಿಗೆ ಗುದ್ದಿರುತ್ತಾನೆ. 5 ನೇ ಆರೋಪಿ ಎಸ್ತೇರಮ್ಮ ಚಾಸಾ-5 ರವರಿಗೆ ಚಪ್ಪಲಿಯಿಂದ ಮುಖಕ್ಕೆ ಹೊಡೆದಿರುತ್ತಾಳೆ. 6 ನೇ ಆರೋಪಿ ಶರಣಮ್ಮ ಈ ಸೂಳೇಯರದು ಬಹಳ ಆಗಿದೆ ಎಂದು ಚಾಸಾ-6 ಮೊರೆಮ್ಮ ಗಂಡ ಹನುಮಂತ ಇವರ ಕೂದಲು ಹಿಡಿದು ಎಳೆದಾಡಿರುತ್ತಾಳೆ. 8 ನೇ ಆರೋಪಿ ಚಾಸಾ-7 ರವರಿಗೆ ಕೈ ಹಿಡಿದು ಎಳೆದಾಡಿ ಕೈಯಿಂದ ಗುದ್ದಿರುತ್ತಾಳೆ. 1 ನೇ ಆರೋಪಿ ಈ ಸೂಳೇಯರದು ಬಹಳ ಆಗಿದೆ ಎಂದು ಚಾಸಾ-8 ರವರ ಕೈ ಹಿಡಿದು ಎಳೆದಾಡಿ ಕುಪ್ಪಸ ಹರಿದು ಅವಮಾನ ಮಾಡಿರುತ್ತಾರೆ. ನಂತರ ಚಾಸಾ-9 ಮತ್ತು 10 ರವರು ಜಗಳ ಬಿಡಿಸಿರುತ್ತಾರೆ. ಈ ಭಾರಿ ಉಳಿದುಕೊಂಡಿರಿ ಇನ್ನೊಂದು ಸಲ ಜಮೀನಿಗೆ ಬಂದರೆ ನಿಮ್ಮನ್ನು

ಕೊಡಲಿನಿಂದ ಸಣ್ಣ ಸಣ್ಣ ತುಂಡು ಮಾಡಿ ಚರಗ ಚಲ್ಲಿದಂತೆ ಜಮೀನಿನಲ್ಲಿ ಚೆಲ್ಲುತ್ತೇವೆ ಅಂತ ಜೀವದ ಬೆದರಿಕೆ ಹಾಕಿರುತ್ತಾರೆ. ಆ ಕುರಿತು ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ದೂರನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಬಡಿಗೆ, ಕಲ್ಲು ಮತ್ತು ಚಪ್ಪಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳ್ನು ಕ್ರಮವಾಗಿ ಮುಮಾ-1 ರಿಂದ 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು:- ಆರೋಪಿತರ SMR ವಕೀಲರಂದ</u>**

ನಾನು ಈಗ ಕಳೆದ 2-3 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಬೆಂಗಳೂರಿನಿಂದ ನನ್ನ ಗ್ರಾಮಕ್ಕೆ ಯಾವ ದಿನಾಂಕಗಳಂದು ಬಂದು ಹೋಗಿರುತ್ತೇನೆ ಎಂದು ಹೇಳಲು ನೆನಪಿರುವುದಿಲ್ಲ. ಆರೋಪಿತರು ನನಗೆ ಸಂಬಂಧಿಗಳು ಆಗಬೇಕು. ನನಗೆ ಅಷ್ಟಾಗಿ ಓದಲು ಬರೆಯಲು ಬರುವುದಿಲ್ಲ. ದೂರನ್ನು ನಾನು ರಾಯಚೂರು ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ದೂರನ್ನು ಮೊದಲು ಜಾಲಹಳ್ಳಿ ಠಾಣೆಗೆ ನೀಡಿದ್ದು ನಂತರ ಆಸ್ಪತ್ರೆಯಿಂದ ಬಂದ ನಂತರ ದೂರನ್ನು ನೀಡಿರುತ್ತೇನೆ. ಘಟನೆ ನಡೆದ ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಗಾಯಗಳು ಆಗಿದ್ದರಿಂದ ಚಿಕಿತ್ಸೆಗಾಗಿ ರಾಯಚೂರು ಆಸ್ಪತ್ರೆಗೆ ಹೋಗಿರುತ್ತೇವೆ. ದೂರನ್ನು ಕೊಡಲು ನನ್ನ ಜೊತೆ ಚಾಸಾ-4 ರಿಂದ 8 ರವರು ಬಂದಿರುತ್ತಾರೆ. ಆಗ ಸಮಯ ಸಂಜೆ 7-8 ಗಂಟೆ ಆಗಿರಬಹುದು. ಠಾಣೆಯಿಂದ ಆಸ್ಪತ್ರೆಗೆ ಖಾಸಗಿ ವಾಹನದಲ್ಲಿ ನಾನು, ಚಾಸಾ-4, 5 ಮತ್ತು ನನ್ನ ಅಣ್ಣ ಮೌನೇಶ ಹೋಗಿರುತ್ತೇವೆ. ಆಸ್ಪತ್ರೆಗೆ ಹೋದಾಗ ರಾತ್ರಿ 12 ಗಂಟೆ ಆಗಿತ್ತು. ಆಸ್ಪತ್ರೆಯಿಂದ ಒಂದು ವಾರದ ನಂತರ ಬಿಡುಗಡೆ ಆಗಿರುತ್ತೇವೆ. ಆಸ್ಪತ್ರೆಯಲ್ಲಿ ನಾನು ಶಿವರಾಜ ಮತ್ತು ಆದಿಶೇಷ ಒಳರೋಗಿಯಾಗಿ ಒಂದು ವಾರ ಚಿಕಿತ್ಸೆ ಪಡೆದಿರುತ್ತೇವೆ.

ಸ.ನಂ.92/2 ಯಾರ ಹೆಸರಿನಲ್ಲಿ ಇರುತ್ತದೆ ನನಗೆ ಗೊತ್ತಿಲ್ಲ. ಮೃತ ಮರಿಯಪ್ಪ ನನಗೆ ತಾತನಾಗಬೇಕು. 1 ನೇ ಆರೋಪಿಗೆ ಮೃತ ಮರಿಯಪ್ಪ ಚಿಕ್ಕಪ್ಪನಾಗಬೇಕು. ಮರಿಯಪ್ಪನ ಮರಣದ ನಂತರ ಸ.ನಂ.92/2 1 ನೇ ಆರೋಪಿ ಹನುಮಂತ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರು ಸಹ ಹನುಮಂತನ ಭಾಗಕ್ಕೆ ಹೋಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಂತ ಸದರಿ ಜಮೀನನ್ನು ಇಲ್ಲಿವರೆಗ ತಾನೇ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿ ಮರಿಯಪ್ಪನ ಮರಣದ ನಂತರ ಹನುಮಂತ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ನನ್ನ ತಾತ ಮರಿಯಪ್ಪ 15-20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ ಆದರೆ ನಿಖರವಾದ ದಿನಾಂಕ, ತಿಂಗಳು ವರ್ಷ ಹೇಳಲು ಬರುವುದಿಲ್ಲ.

ನಾನು ಚಾಸಾ-4 ರಿಂದ 8 ರವರು ಸಂಬಂಧಿಕರು ಎಂದರೆ ಸರಿ. ಮರಯಪ್ಪನ ಮರಣದ ನಂತರ 15-20 ವರ್ಷಗಳಿಂದ ಹನುಮಂತ ಸದರಿ ಜಮೀನಿನ ಸಾಗುವಳಿ ಮಾಡುತ್ತಿದುದ್ದರಿಂದ ಅವರ ಮತ್ತು ನಮ್ಮ ನಡುವೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಂದಾಜು 5 ವರ್ಷಗಳಿಂದ 1 ನೇ ಆರೋಪಿ ಹನುಮಂತ ಸಾಗುವಳಿ ಮಾಡುತ್ತಿದ್ದು ನಮ್ಮ ಭಾಗದ ಜಮೀನು ನೀಡುವಂತೆ ಕೇಳಿದಾಗ ನೀಡದೇ ಇದುದ್ದರಿಂದ ಇತ್ತೀಚೆಗೆ ವೈಮನಸ್ಸು ಬಂದಿರುತ್ತದೆ ಎಂದು ನುಡಿಯುತ್ತಾರೆ. ಕಳೆದ 4-5 ವರ್ಷಗಳಿಂದ ನಮ್ಮ ಮತ್ತು ಆರೋಪಿತರ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿ.

ಘಟನೆ ದಿನಾಂಕ 22.06.2022 ರಂದು ಸಂಜೆ 5 ಗಂಟೆಗೆ ಆಗಿರುತ್ತದೆ. ಸದರಿ ದಿನ ಘಟನೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ದಿನಾಂಕ 22.06.2022 ರಂದು ಸಂಜೆ 6 ಗಂಟೆಗ ನಾನು ಮತ್ತು ಚಾಸಾ-4 ರಿಂದ 8 ರವರು 1 ನೇ ಆರೋಪಿ ಕಬ್ಜೆಯಲ್ಲಿ ಇದ್ದ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿ ಅವರ ಜೊತ ಜಗಳ ತೆಗೆದು ಹಲೆ ಮಾಡಿರುತ್ತೇವೆ ಎಂದು ನಮ್ಮ ವಿರುದ್ದ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದೂರನ್ನು ನಾನು ಹೇಳಿದಂತೆ ಪೋಲಿಸರು ಬರೆದುಕೊಂಡಿರುತ್ತಾರೆ. ದೂರಿನಲ್ಲಿ ಬರೆದ ಸಂಗತಿಗಳನ್ನು ಪೋಲಿಸರು ನನಗೆ ಓದಿ ಹೇಳಿರುತ್ತಾರೆ. ರಾಯಚೂರು ಆಸ್ಪತ್ರೆಯಲ್ಲಿ ಪೋಲಿಸರು ಪುನಃ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಆದರೆ ಹೇಳಿಕೆ ಪಡೆದ ದಿನಾಂಕ ಮತ್ತು ಸಮಯ ಹೇಳಲು ನೆನಪಿರುವುದಿಲ್ಲ. ಠಾಣೆಯಲ್ಲಿ ಮತ್ತು ಆಸ್ಪತ್ರೆಯಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದನ್ನು ಹೊರತು ಪಡಿಸಿ ಬೇರೆ ಕಡೆ ನನ್ನನ್ನು ವಿಚಾರಣೆ ಮಾಡಿಲ್ಲ. ಮುಮಾಗಳನ್ನು ಚಸಾ-2 ಮತ್ತು 3 ಹಾಗೂ 10 ರವರು ಪೋಲಿಸರಿಗೆ ತೋರಿಸಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೋಲಿಸರು ಜಪ್ತಿ ಮಾಡಿಕೊಂಡ ಮುಮಾಗಳನ್ನು ನೋಡಿರುವುದಿಲ್ಲ. ಘಟನ ಸ್ಥಳದ ಪೂರ್ವಕ್ಕೆ ಗುಡ್ಡ, ಪಶ್ಚಿಮಕ್ಕೆ ಗುಡ್ಡ ಮತ್ತು ಜಮೀನುಗಳು ಇದ್ದು ಜಮೀನುಗಳು ಯಾರಿಗೆ ಸೇರಿರುತ್ತವೆ ಹೇಳಲು ಬರುವುದಿಲ್ಲ. ಘಟನೆ ಸಮಯದಲ್ಲಿ ಆರೋಪಿತರ ಕೈಯಲ್ಲಿ ಅಂದಾಜು ಎಷ್ಟು ಬಡಿಗೆ, ಎಷ್ಟು ಕಲ್ಲುಗಳು ಹಾಗೂ ಎಷ್ಟು ಚಪ್ಪಲಿಗಳು ಇದ್ದವು ಹೇಳಲು ಬರುವುದಿಲ್ಲ. ಘಟನೆಯಲ್ಲಿ ಯಾವ ಆರೋಪಿ ಯಾರಿಗೆ ದೇಹದ ಯಾವ ಭಾಗಕ್ಕೆ ಎಷ್ಟು ಏಟುಗಳನ್ನು ಹೊಡೆದಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಎಷ್ಟು ಕಲ್ಲುಗಳಿಗೆ ರಕ್ತ ಹತ್ತಿತ್ತು ಎಂದು ನನಗೆ ಹೇಳಲು ನೆನಪಿರುವುದಿಲ್ಲ. ಚಾಸಾ-4 ಘಟನೆ ದಿನ ಬಿಳಿ ಅಂಗಿ ಮತ್ತು ದೋತಿಯನ್ನು ಧರಿಸಿದ್ದ. ಮುಂಭಾಗದ ಅಂಗಿಗೆ ರಕ್ತದ ಕಲೆಗಳು ಹತ್ತಿದ್ದವು. ರಕ್ತದ ಕಲೆ ಹತ್ತಿದ ಅಂಗಿಯನ್ನು ಪೋಲಿಸರಿಗೆ ನೀಡಿಲ್ಲ. ನನಗೆ ಘಟನೆಯಲ್ಲಿ ಕಪಾಳಕ್ಕೆ, ಹೊಟ್ಟೆಗೆ ಮತ್ತು ಮೊಣಕಾಲಿಗೆ ಮತ್ತು ಕಾಲಿನ ಕೆಳಗೆ ಗಾಯಗಳು ಆಗಿದ್ದವು. ನನಗೆ ರಕ್ತಗಾಯಗಳು

ಆಗಿರುವುದಿಲ್ಲ. ಒಳಪೆಟ್ಟುಗಳು ಆಗಿದ್ದವು. ಜಮೀನಿನಲ್ಲಿ ಯಾವುದೇ ಘಟನೆ ಆಗಿರುವುದಿಲ್ಲ ನಮಗೆ ಆರೋಪಿತರು ಮುಮಾ-1 ರಿಂದ 3 ಇವುಗಳಿಂದ ಹೊಡೆದಿಲ್ಲ, ಗಾಯಗಳು ಆಗಿಲ್ಲ, ಅವಾಚ್ಯವಾಗಿ ಬೈದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಕುಪ್ಪಸ ಹರಿದು ಅವಮಾನ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಮುಮಾ-1 ರಿಂದ 3 ಎಲ್ಲ ಸಿಗುತ್ತವೆ ಎಂದರೆ ಸರಿ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.